ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002

ZILLA PANCHAYAT OFFICE, BELGAUM-590002

ದೂರವಾಣಿ / Telephone: 0831-2407201, 0831-2407206, 0831-2431640

ಫ್ಯಾಕ್ಸ್/Fax: 0831-2429662

e-mail: ceozpbelgaum@yahoo.com, dsdevbgm@gmail.com

ಕ್ರ.ಸಂ:ಜಿಪಂ:ಅಭಿವೃದ್ಧಿ:ಗ್ರಾಪಂ:181:128:2013-14 ದಿನಾಂಕ: -09-2013

## ಅಧಿಕೃತ ಜ್ಞಾಪನ

ವಿಷಯ: ಇ-ಸ್ವತ್ತು ತಂತ್ರಾಶದಲ್ಲಿ ಆನ್‌ಲೈನ್ ಮುಖಾಂತರ ವಿತರಿಸುವ ನಮೂನೆ 9 ಮತ್ತು 11ನ್ನು ಮಾತ್ರ ಪರಿಗಣಿಸುವ ಬಗ್ಗೆ.

ಉಲ್ಲೇಖ:1) ಗ್ರಾಮೀಣ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳ ಸುತ್ತೋಲೆ ಸಂಖ್ಯೆ:ಗ್ರಾಅಪ:166:2013:ದಿ:29-06-2013

2) ಕಂದಾಯ ಇಲಾಖೆಯ ಸರಕಾರದ ಪ್ರಧಾನ ಕಾರ್ಯದರ್ಶಿಗಳ ಸುತ್ತೋಲೆ ಸಂ:ಕಂಇ:146:ASD:2013 di:14-6-2013.

******

ವಿಷಯಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಆಸ್ತಿಗಳಿಗೆ ಸಂಬಂಧಿಸಿದಂತೆ ನಮೂನೆ 9 ಮತ್ತು 11ನ್ನು ಆನ್‌ಲೈನ ಮೂಲಕ ವಿತರಿಸುವ ಸಲುವಾಗಿ, ಇ-ಸ್ವತ್ತು ತಂತ್ರಾಂಶವನ್ನು ಗ್ರಾಮೀಣ ಅಭಿವೃದ್ಧಿ ಇಲಾಖೆಯು ಅಭಿವೃದ್ಧಿ ಪಡಿಸಿದ್ದು, ಗ್ರಾ.ಪಂ.ಗಳ ಆಸ್ತಿಗಳಿಗೆ ಸಂಬಂಧಿಸಿದಂತೆ ಆನ್‌ಲೈನ ಮುಖಾಂತರ ಮಾತ್ರ ನಮೂನೆ-9 ಮತ್ತು 11ನ್ನು ವಿತರಿಸಬೇಕೆಂದು ಸ್ಪಷ್ಟಪಡಿಸಿದೆ. ಕೈಬರಹದ ಮುಖಾಂತರ ಹಾಗೂ ಹಳೆಯ ನಮೂನೆಯಲ್ಲಿ ನಮೂನೆ-9 ಮತ್ತು 11ನ್ನು ವಿತರಿಸುವ ಪದ್ಧತಿಯನ್ನು ರದ್ದುಗೊಳಿಸಲಾಗಿದೆ.

ಗ್ರಾ.ಪಂ.ಯ ನಾಗರಿಕರು ನಮೂನೆ-9 ಮತ್ತು 11ನ್ನು ಕೇಳಿದಾಗ ಅಂತಹ ಸ್ವತ್ತು ಗ್ರಾಮಠಾಣದಲ್ಲಿ ಬರುತ್ತದೆಯೇ? ಎಂಬ ವಿವರ, ಅಂತಹ ಸ್ವತ್ತಿನ ಅಳತೆ, ನಕಾಶೆ ಮತ್ತು ಚೆಕ್ಕುಬಂದಿ, ಈ ಬಗೆಯ ವಿವರಗಳನ್ನು ತಾಲೂಕಿನ ತಹಶೀಲ್ದಾರರಿಂದ ಪಡೆದು ಆನ್‌ಲೈನ ಮೂಲಕ ಹೊಸ ನಮೂನೆಯಲ್ಲಿ, ನಮೂನೆ-9 ಮತ್ತು 11 ದನ್ನು ಪಂಚಾಯತ ಅಭಿವೃದ್ಧಿ ಅಧಿಕಾರಿಗಳು, ವಿತರಿಸಬೇಕಾಗಿದೆ.

ಆದುದರಿಂದ ಇನ್ನುಮುಂದೆ ಕೈಬರಹದ ಮೂಲಕ, ಹಳೆಯ ನಮೂನೆಗಳಲ್ಲಿ ನೀಡುವ ನಮೂನೆ -9 ಮತ್ತು 11ನ್ನು ಸ್ವೀಕರಿಸಿ ಅವುಗಳ ಆಧಾರದ ಮೇಲೆ ಯಾವುದೇ ಉಪನೋಂದಣಾಧಿಕಾರಿಗಳು ಗ್ರಾ.ಪಂ.ಯ ಆಸ್ತಿಗಳನ್ನು ನೋಂದಣಿ (REGISTRATION) ಮಾಡಬಾರದೆಂದು ಈ ಮೂಲಕ ತಿಳಿಸಿದೆ.

ಅಂತೆಯೇ ಹೆಸ್ಕಾಂ ಗೆ ಸಂಬಂಧಪಟ್ಟ ಎಲ್ಲ ಕಚೇರಿಗಳ ಮುಖ್ಯಾಧಿಕಾರಿಗಳು ಮತ್ತು ಬ್ಯಾಂಕುಗಳ ವ್ಯವಸ್ಥಾಪಕರುಗಳಿಗೆ ಗ್ರಾ.ಪಂ. ವತಿಯಿಂದ ಆನ್‌ಲೈನ್ ಮೂಲಕ ವಿತರಿಸಲ್ಪಡುವ ನಮೂನೆ-9 ಮತ್ತು 11ನ್ನು ಮಾತ್ರ ತಮ್ಮ ಕಾರ್ಯಾಲಯಗಳ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಪರಿಗಣಿಸಬೇಕೆಂದು, ಕೈಯಿಂದ ಹಳೆಯ ನಮೂನೆಯಲ್ಲಿ ತಯಾರಿಸಲ್ಪಟ್ಟು ವಿತರಿಸಲ್ಪಡುವ ನಮೂನೆ-9 ಮತ್ತು 11ನ್ನು ಯಾವುದೇ ವ್ಯವಹಾರಗಳಿಗೆ ಪರಿಗಣಿಸಬಾರದೆಂದು ಈ ಮೂಲಕ ಸೂಚಿಸಿದೆ.

(ದೀಪಾ ಚೋಳನ್)
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ.

**ಪ್ರತಿಯನ್ನು ಮಾಹಿತಿ ಹಾಗೂ ಅವಶ್ಯ ಕ್ರಮಕ್ಕಾಗಿ:**

1) ಸನ್ಮಾನ್ಯ ಕಾರ್ಯದರ್ಶಿಗಳು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ ಬಹುಮಹಡಿ ಕಟ್ಟಡ 3ನೇ ಮಹಡಿ ಬೆಂಗಳೂರು ಇವರಿಗೆ.
2) ನಿರ್ದೇಶಕರು, ಪಂಚಾಯತ ರಾಜ್ ಹಾಗೂ ಪದನಿಮಿತ್ತ ಸರಕಾರದ ಉಪಕಾರ್ಯದರ್ಶಿಗಳು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ ಬಹುಮಹಡಿಗಳ ಕಟ್ಟಡ 3ನೇ ಮಹಡಿ ಬೆಂಗಳೂರು ಇವರಿಗೆ.
3) ಬೆಳಗಾವಿ ಜಿಲ್ಲೆಯ ಎಲ್ಲಾ ನೋಂದಣಾಧಿಕಾರಿಗಳು/ಉಪನೋಂದಣಾಧಿಕಾರಿಗಳಿಗೆ
4) ಬೆಳಗಾವಿ ಜಿಲ್ಲೆಯ ಎಲ್ಲಾ ಬ್ಯಾಂಕುಗಳ ವ್ಯವಸ್ಥಾಪಕರುಗಳಿಗೆ
5) ಬೆಳಗಾವಿ ಜಿಲ್ಲೆಯ ಎಲ್ಲಾ ತಾಲೂಕುಗಳ ಹೆಸ್ಕಾಂ ಕಚೇರಿಗಳ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳಿಗೆ
6) ಬೆಳಗಾವಿ ಜಿಲ್ಲೆಯ ಎಲ್ಲಾ ತಾಲೂಕುಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸುತ್ತಾ, ಪ್ರತಿಯನ್ನು ತಮ್ಮ ತಮ್ಮ ತಾಲೂಕಿನ ವ್ಯಾಪ್ತಿಯ ಪಂಚಾಯತ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿಗಳಿಗೆ ಜ್ಯಾರಿ ಮಾಡಿ ಸ್ವೀಕೃತಿ ಪಡೆದು ಈ ಕಾರ್ಯಾಲಯಕ್ಕೆ ಸಲ್ಲಿಸಲು ತಿಳಿಸಿದೆ.
7) ಕಚೇರಿ ಕಡತಕ್ಕೆ.
8) ಹೆಚ್ಚಿನ ಪ್ರತಿ.